**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ,**
**ಕುಂದಾಪುರ**

**ಸಿ.ಸಿ.ನಂ. 2319/2017**

**ಸರ್ಕಾರದ ಪರ ಕುಂದಾಪುರ ಠಾಣಾ ಪೋಲೀಸರು .... ಪಿರ್ಯಾದುದಾರರು**

**ಃ ವಿರುದ್ಧ ಃ**

**1. ಸುಬ್ರಹ್ಮಣ್ಯ ಶೆಟ್ಟಿ,**
**ತಂದೆಃ ಬಾಬು ಶೆಟ್ಟಿ,**
**ವಾಸಃ ನಲ್ಲೂರು ಕವಳಗೇರಿ,**
**ನೀಲಂದೂರು, ಶ್ರಿಂಗೇರಿ ತಾಲೂಕು,**
**ಚಿಕ್ಕಮಗಳೂರು ಜಿಲ್ಲೆ. (ಮೃತಪಟ್ಟಿರುತ್ತಾರೆ)**

**2. ಗೋಪಿಕೃಷ್ಣ, 27 ವರ್ಷ,**
**ತಂದೆಃ ಮಾರಿಯಪ್ಪ,**
**ವಾಸಃ ಜನತಾ ಕಾಲೋನಿ, ನವನಗರ,**
**ವಕ್ವಾಡಿ ಗ್ರಾಮ,ಕುಂದಾಪುರ ತಾಲೂಕು.**

**3. ರಫೀಕ್ ಯಾನೆ ಅಪ್ಪಿ, 23 ವರ್ಷ,**
**ತಂದೆಃ ಅಬ್ದುಲ್ ರಶೀದ್,**
**ವಾಸಃ ಜನತಾ ಕಾಲೋನಿ, ನವನಗರ,**
**ವಕ್ವಾಡಿ ಗ್ರಾಮ, ಕುಂದಾಪುರ ತಾಲೂಕು. ..... ಆರೋಪಿತರು**

## ದೋಷಾರೋಪಣೆ

**ಶ್ರೀ ಶ್ರೀಕಂಠ ಎನ್.ಎ., ಬಿ.ಎ., ಎಲ್ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾ.ದಂ., ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ**

**ಆರೋಪಿತರಾದ ನೀವುಗಳು ಸಾಕ್ಷಿ1ನೇಯವರ ಮನೆಯ ಬಳಿ ಕಾರಿನಲ್ಲಿ ಜೋರಾಗಿ ಸ್ಟೀರಿಯೋ ಹಾಡು ಹಾಕಿದ್ದಕ್ಕೆ ಸಾಕ್ಷಿ1ನೇಯವರು ಆಕ್ಷೇಪಿಸಿದ್ದು ಅದೇ ಕಾರಣದಿಂದ ದಿ. 16.06.2017 ರಂದು ಪಿರ್ಯಾದುದಾರರು ಸಾಕ್ಷಿ 2ನೇಯವರೊಂದಿಗೆ ಟಾಟಾ ಪಿಕಪ್ ವಾಹನದಲ್ಲಿ ಅಸೋಡು ಗ್ರಾಮದ ನಂದಿಕೇಶ್ವರ ದೇವಸ್ಥಾನದ ಕಡೆಯಿಂದ ಕಾಳಾವರ ಕಡೆಗೆ ಬರುತ್ತಾ ಸಂಜೆ ಸುಮಾರು 5.30 ಗಂಟೆಗೆ ದೇವಸ್ಥಾನ ರಸ್ತೆಯಲ್ಲಿ ಚಂದ್ರ ಆಚಾರಿಯವರ ಮನೆಯ ಬಳಿ ತಲುಪುವಾಗ 2 ಮತ್ತು 3ನೇ ಆರೋಪಿತರಾದ ನೀವುಗಳು ಮೃತ 1ನೇ ಆರೋಪಿತನ ಜೊತೆ ಕೆಎ 19 ಎಮ್ಎ 1871 ನೇ ನಂಬ್ರದ ಹುಂಡೈ ವರ್ನಾ ಕಾರಿನಲ್ಲಿ ಬಂದು ಸಮಾನ ಉದ್ದೇಶದಿಂದ ಸಾಕ್ಷಿ 1ನೇಯವರ**

ವಾಹನವನ್ನು ಅಕ್ರಮವಾಗಿ ತಡೆದು ನಿಲ್ಲಿಸಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ, ಆಪಾದಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ ಚಾ.ಸಾ.1ನೇಯವರನ್ನುದ್ದೇಶಿಸಿ "ನಿನಗೆ ಬಾರಿ ಅಹಂಕಾರ ಇದೆ 'ಬೋಳಿಮಗನೆ'' ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನಗೊಳಿಸಿ ಅವರನ್ನು ಬೇರೆ ಅಪರಾಧ ಮಾಡುವಂತೆ ಪ್ರಚೋದಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ, 2 ಮತ್ತು 3ನೇ ಆಪಾದಿತರಾದ ನೀವುಗಳು ಮೃತ 1ನೇ ಆರೋಪಿತನೊಂದಿಗೆ ಸೇರಿಕೊಂಡು ಸಮಾನ ಉದ್ದೇಶವನ್ನು ಮುಂದುವರೆಸಿ ಸ್ವ ಇಚ್ಛೆಯಿಂದ ಚಾ.ಸಾ.1ನೇಯವರ ಮುಖಕ್ಕೆ ಕೈಯಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ, 2 ಮತ್ತು 3ನೇ ಆಪಾದಿತರಾದ ನೀವುಗಳು ಮೃತ 1ನೇ ಆರೋಪಿತನೊಂದಿಗೆ ಸೇರಿಕೊಂಡು ಸಮಾನ ಉದ್ದೇಶವನ್ನು ಮುಂದುವರೆಸಿ ಆ ಪೈಕಿ ಮೃತ 1ನೇ ಆರೋಪಿತ ಚಾ.ಸಾ. 1ನೇಯವರಿಗೆ ಹೆಂಚಿನ ತುಂಡಿನಿಂದ ಎಡಕಣ್ಣಿನ ಬಳಿ ಮತ್ತು ಮುಖಕ್ಕೆ ಹೊಡೆದಿದ್ದು ಹಾಗೂ 2ನೇ ಆರೋಪಿತರಾದ ನೀವು ಸ್ವ ಇಚ್ಛೆಯಿಂದ ಪ್ಲಾಸ್ಟಿಕ್ ಪೈಪ್ ತುಂಡಿನಿಂದ ಸಾಕ್ಷಿ 1ನೇಯವರಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

5. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ, 2 ಮತ್ತು 3ನೇ ಆಪಾದಿತರಾದ ನೀವುಗಳು ಮೃತ 1ನೇ ಆರೋಪಿತನೊಂದಿಗೆ ಸೇರಿಕೊಂಡು ಸಮಾನ ಉದ್ದೇಶವನ್ನು ಮುಂದುವರೆಸಿ ಸ್ವ ಇಚ್ಛೆಯಿಂದ ಸಾಕ್ಷಿ 1ನೇಯವರನ್ನು ಅಕ್ರಮವಾಗಿ ಹಾಗೂ ಗೌಪ್ಯವಾಗಿ ಬಂಧನದಲ್ಲಿ ಇರಿಸುವ ಉದ್ದೇಶದಿಂದ ಬಲಾತ್ಕಾರವಾಗಿ ಕೆಎ 19 ಎಮ್‌ಎ 1871 ನೇ ಕಾರಿನಲ್ಲಿ ಅಪಹರಿಸಿ ಕಾಳಾವರ

ಅಭಿಮಾನ್ ಬಾರ್ ಬಳಿ ಕಾರಿನಿಂದ ಇಳಿಸಿ ಹೋಗಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 365 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

(ಶ್ರೀಕಂಠ ಎನ್.ಎ.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ

Phs